**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ**

**ಸಿಂದಗಿ**

ಸಿ.ಸಿ.ನಂಬರ್ : 100/2020

ಪಿ.ಡಬ್ಲ್ಯೂ : 2

ಸಿ.ಡಬ್ಲ್ಯೂ : 4

| | |
|---|---|
| ಸಾಕ್ಷಿದಾರರ ಹೆಸರು | : ವಿಜಯ ಬೂದಿಹಾಳ |
| ತಂದೆಯ ಹೆಸರು | : ಮಲ್ಲಿಕಾರ್ಜುನ ಬೂದಿಹಾಳ |
| ವಯಸ್ಸು | : 46 |
| ಉದ್ಯೋಗ | : ಪೋಲಿಸ ಪೇದೆ ಸಂಚಾರಿ ಠಾಣೆ ವಿಜಯಪುರ |
| ವಾಸಸ್ಥಳ | : ವಿಜಯಪುರ |
| ಸಮಯ | 1.35 |

ಸಾಕ್ಷಿಗೆ ಇಂದು ದಿನಾಂಕಃ 05.07.2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ನಾನು 2017 ರಿಂದ 2020 ರವರೆಗೆ ನಾನು ದೇವರ ಹಿಪ್ಪರಗಿ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08-09-2019 ರಂದು ನಾನು ದೇವರ ಹಿಪ್ಪರಗಿಯ ಬಸ್ ನಿಲ್ದಾಣ ಹತ್ತಿರದ ಕರ್ತವ್ಯದಲ್ಲಿದ್ದಾಗ ಚಾ ಸಾ 1 ರವರು ಮದ್ಯಾಹ್ನ 12 .15 ಗಂಟೆಗೆ ಕರೆ ಮಾಡಿ ದಾಳಿ ಹೋಗುವ ವಿಷಯ ತಿಳಿಸಿ ನಾನು ಮತ್ತು ಚಾ ಸಾ5 ಮತ್ತು 6 ರವರು ಠಾಣೆಗೆ ಹೋಗಿದ್ದು ತಮಗೆ ಬಾತ್ಮಿ ಬಂದ ವಿಷಯ ನಮಗೆ ತಿಳಿಸಿದ ನಂತರ ನಾವು ಚಾ ಸಾ1 ಪಂಚರು ಎಲ್ಲರೂ ಸೇರಿಕೊಂಡು ನಮ್ಮ ಇಲಾಖಾ ವಾಹದಲ್ಲಿ ವಿನಯ ದಾಬಾದ ಹತ್ತಿರ ಹೋಗಿರುತ್ತೇವೆ. ಚಾ ಸಾ 1 ರವರೇ ಪಂಚರನ್ನು ಕರೆಯಿಸಿದ್ದರು.

ನಂತರ ನಾವು ಸ್ಥಳಕ್ಕೆ ಹೋಗಿ ಗಮನಿಸಲಾಗಿ ಇಬ್ಬರು ವ್ಯಕ್ತಿಗಳು ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು, ನಾವು ಅವರ ಮೇಲೆ ದಾಳಿ ಮಾಡಿ ಹಿಡಿಯಲು ಹೋದಾಗ ಒಬ್ಬ ವ್ಯಕ್ತಿ ಸಿಕ್ಕಿದ್ದು ಮತ್ತೊಬ್ಬ ಓಡಿ ಹೋಗಿರುತ್ತಾನೆ. ನಂತರ ಸದರಿ ವ್ಯಕ್ತಿಯನ್ನು ಪರಿಶೀಲನೆ ಮಾಡಲಾಗಿ ಆತನ ಹತ್ತಿರ 14 ಬ್ಯಾಗ ಪೈಪರ ವಿಸ್ಕಿ ಪೌಚಗಳು, ಸ್ಯಾಮಸಂಗ ಮೊಬೆಲ, 21 ಟೀನ್ ಬೀಯರಗಳು, 285 ರೂಪಾಯಿ ನಗದು ಹಣ ಸದರಿ ಮು ಮಾಲುಗಳನ್ನು ಪಂಚರ ಸಮಕ್ಷಮ ಚಾ ಸಾ 1 ರವರು ಮದ್ಯಾಹ್ನ 1 ರಿಂದ 1.30 ಗಂಟೆವರೆಗೆ ಮಾಡಿರುತ್ತಾರೆ . ಜಪ್ತು ಮಾಡಿಕೊಂಡು ಮು ಮಾಲುಗಳನ್ನು ವಿಧಿ ವಿಜ್ಞಾನ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದುಕೊಂಡು ಚಾ ಸಾ 1 ರವರು ಆರೋಪಿಯಾಂದಿಗೆ ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತಾರೆ.

ನಾವು ಹಿಡಿದುಕೊಂಡು ಆರೋಪಿಯನ್ನು ಗುರುತಿಸುತ್ತೇನೆ ಆತನ ಹೆಸರು ಯಮನಪ್ಪ ಇದ್ದು ಸದರಿ 1 ಮತ್ತು 2 ನೇ ಆರೋಪಿತರು ಗೈರು ಹಾಜರಿದ್ದು, ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು 1 ನೇ ಆರೋಪಿಯ ಗುರುತಿಸುವಿಕೆ ಕುರಿತು ಯಾವುದೇ ತಕರಾರು ಇಲ್ಲ ಎಂದು ನುಡಿರದಿರುತ್ತಾರೆ. ನಾನು

ಜಪ್ತುಪಡಿಸಿಕೊಂಡು ಮು ಮಾಲುಗಳನು ನೋಡಿದರೆ ಗುರುತಿಸುತ್ತೇನೆ. ಸಧ್ಯ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡದೇ ಇರುವ ಕಾರಣ ಮಾನ್ಯ ಸರ್ಕಾರಿ ಅಭಿಯೋಜಕರು ಮುದುವರೆದ ಮುಖ್ಯ ವಿಚಾರಣೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.